**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 23/2023**

| | | | |
|---|---|---|---|
| **ಹೆಸರು** | **:** | **ಕಮಲಾಬಾಯಿ** | **ಚಾ.ಸಾ. 8** |
| **ಗಂಡನ ಹೆಸರು** | **:** | **ಬಕ್ಕಪ್ಪ** | **ಪ್ರಾ.ಸಾ. 3** |
| **ವಯಸ್ಸು** | **:** | **64 ವರ್ಷ** | **ದಿನಾಂಕಃ 30-06-2025** |
| **ಉದ್ಯೋಗ** | **:** | **ಇಲ್ಲ** | |
| **ವಾಸಸ್ಥಳ** | **:** | **ಗೌಡನ ಹಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಚಾಸಾ-9 ರಿಂದ 11 ರವರು ನಮ್ಮ ಊರಿನವರು. ಚಾಸಾ-1 ನನಗೆ ಗೊತ್ತಿಲ್ಲ. ಆರೋಪಿ ಈಶ್ವರ ನಮ್ಮ ಊರಿನವನು. ಮೃತ ಶಾಂತಾಬಾಯಿ ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ಈಗ 3 ವರ್ಷಗಳ ಹಿಂದೆ ಚಂದಾಪುರದಿಂದ ಗೌನಳ್ಳಿ ಗ್ರಾಮಕ್ಕೆ ನಾನು, ಚಾಸಾ-9 ಹೀಗೆ ಒಟ್ಟು 5 ರಿಂದ 6 ಜನರು ಆಟೋದಲ್ಲಿ ಹೋಗುತ್ತಿದ್ದೇವು. ಆ ದಿನ ಆಟೋವನ್ನು ನ್ಯಾಯಾಲಯದ ಮುಂದೆ ಇರುವ ಆರೋಪಿ ಚಲಾಯಿಸುತ್ತಿದ್ದ. ಸದರಿ ಆಟೋ ಈಗ ನೋಡುತ್ತಿರುವ ಭಾವಚಿತ್ರಗಳಲ್ಲಿ ಇವೆ. ಸದರಿ ಭಾವಚಿತ್ರಗಳನ್ನು ನಿಪಿ-5 ರಿಂದ 7 ಎಂದು ಗುರುತಿಸಲಾಯಿತು. ಚಿಮ್ಮನಚೂಡ ರಸ್ತೆಯಲ್ಲಿ ಹೋಗುವಾಗ ಸದರಿ ಆಟೋ ಬಿದ್ದಿರುತ್ತದೆ. ಆಗ ನನ್ನ ತಲೆಗೆ ಹಾಗೂ ನನ್ನ ಕೈಗೆ ಗಾಯವಾಗಿರುತ್ತದೆ. ಈಗ ನೋಡುತ್ತಿರುವ ಭಾವಚಿತ್ರದಲ್ಲಿರುವ ಮಹಿಳೆ ಸದರಿ ಆಟೋದಲ್ಲಿ ಕುಳಿತ್ತಿದ್ದರು. ಸದರಿ ಭಾವಚಿತ್ರವನ್ನು ನಿಪಿ-8 ಎಂದು ಗುರುತಿಸಲಾಯಿತು. ಯಾರ ತಪ್ಪಿನಿಂದ ಆಟೋ ಬಿದ್ದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅಪಘಾತವಾದಾಗ ಸಾಯಂಕಾಲ 4.30 ರಿಂದ 5 ಗಂಟೆಯಾಗಿತ್ತು. ಅಪಘಾತದ ಬಗ್ಗೆ ಪೋಲಿಸರು ನಮ್ಮ ಹೇಳಿಕೆ ಪಡೆದಿಲ್ಲ. ಯಾವ ಸ್ಥಳದಲ್ಲಿ ಆಟೋ ಬಿದ್ದಿತ್ತು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಆ ದಿನ ಆರೋಪಿ ಆಟೋವನ್ನು ವೇಗವಾಗಿ ಚಲಾಯಿಸಿ ಒಮ್ಮೇಲೆ ಬ್ರೇಕ್ ಹಾಕಿದ ಕಾರಣ ಆರೋಪಿ ತಪ್ಪಿನಿಂದ ಅಪಘಾತವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ನಾನು ದಿನಾಂಕ 28-07-2022 ರಂದು

ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು. ಆರೋಪಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ MSS ವಕೀಲರಿಂದಃ**

ನಿಪಿ-8 ರಲ್ಲಿರುವ ಮಹಿಳೆಗೆ ನಾನು ನೋಡಿಲ್ಲ ಎಂದರೆ ಸರಿ. ಆ ದಿನ ಆಟೋದಲ್ಲಿ ಯಾರ ಕುಳಿತಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನಮ್ಮ ಗ್ರಾಮದ 4 ಜನ ಮತ್ತು ಬೇರೆ ಗ್ರಾಮದವರು ಕುಳಿತಿದ್ದರು ಎಂದು ನುಡಿಯುತ್ತಾರೆ. ನನಗೆ ಈ ಪ್ರಕರಣದ ನೋಟಿಸ ಬರುವವರೆಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**